# ಕಪ್ಪು ಎನ್ನಲು ಬೇಡವೋ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
2. **Note:** Singer has followed these wordings.

ರಾಗ: ಶಂಕರಾಭರಣ ತಾಳ: ಅಟ

ಕಪ್ಪು ಎನ್ನಲು ಬೇಡವೋ, ಶ್ರೀ ಹರಿಯನ್ನು
ಕಪ್ಪು ಎನ್ನಲು ಬೇಡವೋ || ಪ ||

ಹರಿಯ ಮಧ್ಯದಿ ಕಪ್ಪು, ಹಾಲಾಹಲವು ಕಪ್ಪು,
ಪರಮ ಅಶ್ವವೆ ಕಪ್ಪು
ಪಾರಿಜಾತವೆ ಕಪ್ಪು, ಕರಿಗಳೆಲ್ಲವು ಕಪ್ಪು, ಸುಲಲಿತ ವರನೆ ಕಪ್ಪು
ಸನ್ನುತವಾದ ಹರಿಹಯ ನೀಲಿಕಪ್ಪು, ಅಂಗನೆ ಕೇಳು
ಜಗದೊಳು ಗುಲಗುಂಜಿ ಶಿರಗಳೆಲ್ಲವು ಕಪ್ಪು || 1 ||

ಬರೆವ ಕಂಟವೆ ಕಪ್ಪು, ಭಾರದ್ವಾಜವೆ ಕಪ್ಪು,
ವರ ರಾಘವನ್ನ ಪಾವನಾಂಗವೆ ಕಪ್ಪು,
ಎರೆವ ಭೂಮಿಯು ಕಪ್ಪು, ಎಸೆವ ಕಸ್ತೂರಿ ಕಪ್ಪು
ಸುಲಲಿತ ವರನೆ ಕಪ್ಪು, ಅಂಗನೆ ಕೇಳು
ಮೂರು ಲೋಕದಿ ನಮ್ಮ ಮುದ್ದು ಕೃಷ್ಣನೆ ಕಪ್ಪು || 2 ||

ಶಾಲಿಗ್ರಾಮವೆ ಕಪ್ಪು, ಸರಸಿಜೋದ್ಭವ ಕಪ್ಪು, ಲೋಲಂಬಗಳು ಕಪ್ಪು
ರುಚಿತ ಕೋಗಿಲೆ ಕಪ್ಪು, ಮಾಲವುತ್ತ್ವವೆ ಕಪ್ಪು, ನಿರ್ಮಲ ಚಿತ್ರವೆ ಕಪ್ಪು
ಕಾಳಿಂದೀ ನದಿಯ ಕಪ್ಪು, ಕಾಮಿನಿಯರ
ಕರಿಮಣಿ ಸರವೆ ಕಪ್ಪು, ಅಂಗನೆ ಕೇಳು
ಮೂರು ಲೋಕದಿ ನಮ್ಮ ಪುರಂದರ ವಿಠಲನ ಮೂರುತಿ ಕಪ್ಪು || 3 ||

**Classification:** Keerthane

**Ankita:** purandara vittala

**Location:** NA

**Category:** Jeevana Darshana, artha bhava,

**Sub-Category:** kappu, Krishna, visha, kudure, parijatha, gaja, loka, bhumi, Kasturi, saligrama, Nirmala,

**Pravachana:** NA

**Explanation:** NA